ಸಂಯುಕ್ತ ಕರ್ನಾಟಕ

# ಮಕ್ಕಳಿಗೆ ಶಿಕ್ಷಣದಿಂದ ಆಳವಾದ ಜವಾಬ್ದಾರಿ ಕಲಿಸಬೇಕು: ಮೆನನ್

## ರೇವಾ ವಿವಿಯಲ್ಲಿ ಸಂಸ್ಥಾಪನಾ ದಿನಾಚರಣೆ




ರೇವಾ ವಿಶ್ವವಿದ್ಯಾಲಯದಲ್ಲಿ ನಡೆದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾರತೀಯ ವಾಯುಪಡೆಯ ಮಾಜಿ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಫಾಲಿ ಎಚ್. ಮೇಜರ್ ಅವರಿಗೆ ರೇವಾ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಂ.ಕ. ಸಮಾಚಾರ, ಬೆಂಗಳೂರು

ಶಿಕ್ಷಣದಿಂದ ಕೇವಲ ವೃತ್ತಿಪರ ಗುರಿ ರೂಪಿಸಿದರಷ್ಟೇ ಸಾಲದು. ಆಳವಾದ ಜವಾಬ್ದಾರಿ ಸಹ ಕಲಿಸಬೇಕು. ಶಿಕ್ಷಣ ಒಂದು ವ್ಯವಹಾರವಾಗಿ ಅಲ್ಲದೆ, ಪವಿತ್ರ ಯಾತ್ರೆಯ ರೀತಿಯಲ್ಲಿ ಪರಿಗಣಿಸಬೇಕು ಎಂದು ಭಾರತೀಯ ರಾಜತಾಂತ್ರಿಕ, ಮಾಜಿ ವಿದೇಶಾಂಗ ಕಾರ್ಯದರ್ಶಿ ನಿರೂಪಮಾ ಮೆನನ್ ರಾವ್ ತಿಳಿಸಿದರು.

ರೇವಾ ವಿವಿ ಕುಲಪತಿ ಡಾ.ಪಿ. ಶ್ಯಾಮರಾಜು ಅವರ ಜನ್ಮದಿನದ ಅಂಗವಾಗಿ ರೇವಾ ವಿಶ್ವವಿದ್ಯಾಲಯದಲ್ಲಿ ನಡೆದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರೇವಾ ವಿ.ವಿ. ಕುಲಪತಿ ಡಾ.ಪಿ. ಶ್ಯಾಮ ರಾಜು ಮಾತನಾಡಿ, ಮೌಲ್ಯಗಳು, ಶಿಸ್ತು, ಕಠಿಣ ಪರಿಶ್ರಮ, ಹಿರಿಯರಿಗೆ ಗೌರವ ನೀಡುವುದು ಮತ್ತು ಸವಾಲುಗಳನ್ನು ಧೈರ್ಯದಿಂದ ಎದುರಿಸುವುದು. ಈ ಎಲ್ಲ ಗುಣಗಳನ್ನು ವಿದ್ಯಾರ್ಥಿಗಳು ತಮ್ಮಲ್ಲಿ ಅಳವಡಿಸಿಕೊಳ್ಳಬೇಕು ತಿಳಿಸಿದರು. ಭಾರತೀಯ ವಾಯು ಸೇನೆ ಮಾಜಿ ಚೀಫ್ ಆಫ್ ಏರ್ ಸ್ಟಾಫ್ ಏರ್ ಚೀಫ್ ಮಾರ್ಷಲ್ ಫಾಲಿ ಎಚ್. ಮೇಜರ್, ಭಾರತೀಯ ರಾಜತಾಂತ್ರಿಕ ನಿರುಪಮಾ ಮೆನನ್ ರಾವ್, ನಟಿ ಜಯಸುಧಾ ಅವರಿಗೆ ರೇವಾ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. 'ರಿಯಾ' (ಎಐ–ಚಾಲಿತ ಹ್ಯೂಮನಾಯ್ಡ್) ಅನ್ನು ಅನಾವರಣಗೊಳಿಸಲಾಯಿತು. ಈ ವೇಳೆ ಉಪಕುಲಪತಿ ಡಾ. ಸಂಜಯ್ ಆರ್.,ಕುಲಸಚಿವ ಡಾ.ಎಂ.ಧನಂಜಯ, ಉಮೇಶ್ ಎಸ್.ರಾಜು ಮತ್ತಿತರರು ಹಾಜರಿದ್ದರು.